ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 21.03.2023.**

**ಪಾಟೀ ಸವಾಲು - 2 ರಿಂದ 6ನೇ ಪ್ರತಿವಾದಿಗಳ ಪರ ಶ್ರೀ. ವೈ.ಎನ್.ಎಂ., ವಕೀಲರಿಂದ**

4) ನಾನು ಭಾಗಕ್ಕೋಸ್ಕರ ಈ ದಾವೆ ಹಾಕಿದ್ದೇನೆ. ನಾನು ಈ ದಾವೆಯನ್ನು ಯಾರ ಯಾುರ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಅಕ್ಕಯಮ್ಮ, ಮುಕುಂದರಾಜು ಮತ್ತು ಸಿಂಗಾಚಾರ್ ಇವರ ವಿರುದ್ಧ ಸಲ್ಲಿಸಿದ್ದೇನೆ. ನಾನು ಸರ್ವೆ ನಂ.47 ರಲ್ಲಿ 38 ಗುಂಟೆ ಮತ್ತು ಸರ್ವೆ ನಂ.51 ರಲ್ಲಿ 25 ಗುಂಟೆ ಬಗ್ಗೆ ಈ ದಾವೆ ಹಾಕಿರುತ್ತೇನೆ. ಈ ದಾವೆಯ ವಾದಿ ನಂ.2, 3 ಮತ್ತು ಪ್ರತಿವಾದಿ ನಂ.1 ರವರು ಎಲ್ಲಿ ವಾಸ ಮಾಡುತ್ತಾರೆ ಎಂದರೆ ಕುಂದಾಣ ಹೋಬಳಿಯ ನಾಗಮಂಗಲದಲ್ಲಿ ವಾಸ ಮಾಡುತ್ತಾರೆ. ಸದರಿಯವರು ವಾಸ ಮಾಡುತ್ತಿರುವ ಮನೆಗಳನ್ನು ಈ ದಾವೆಗೆ ಸೇರಿಸಲಾಗಿದೆಯೇ ಎಂದರೆ ಸೇರಿಸಿಲ್ಲ. 1 ನೇ ಪ್ರತಿವಾದಿ ಅಕ್ಕಯಮ್ಮನ ಹೆಸರಿಗೆ ಖಾತೆ ಇರುವ ಬೇರೆ ಆಸ್ತಿಗಳನ್ನು ಕೂಡ ಈ ದಾವೆಯಲ್ಲಿ ಸೇರಿಸಿಲ್ಲ. ನಾನು ಈ ದಾವಾ ಸ್ವತ್ತುಗಳ ಚೆಕ್ಕುಬಂದಿಯನ್ನು ಹೇಳಬಲ್ಲೆ.

5) ಐಟಂ ನಂ.2 ಸರ್ವೆ ನಂ.51 ನ್ನು ನನ್ನ ತಂದೆಗೆ ಸರ್ಕಾರದಿಂದ ಮಂಜೂರು ಮಾಡಲಾಗಿದೆ ಎಂದರೆ ಸರಿ. ಐಟಂ ನಂ.1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. (ಈ ಹಂತದಲ್ಲಿ ವಾದಿಯ ಪರ ವಕೀಲರು ಮಧ್ಯ ಪ್ರವೇಶ ಮಾಡಿದ್ದಾರೆ, ವಾದಿ ಪರ ವಕೀಲರಿಗೆ ಅವರು ಏನಾದರೂ ಹೇಳಬಯಸಿದರೆ ಅದನ್ನು ನ್ಯಾಯಾಲಯಕ್ಕೆ ಆಂಗ್ಲದಲ್ಲಿ ಹೇಳಬೇಕು ಇಲ್ಲವಾದರೆ ಸಾಕ್ಷಿಯು ಅದರ lead ತೆಗೆದುಕೊಂಡು ಉತ್ತರ ಬೇರೆ ಹೇಳುವ ಸಾಧ್ಯತೆ ಇರುತ್ತದೆ ಎಂದು ತಿಳಿಸಲಾಗಿದೆ). ದಾವಾ ಐಟಂ ನಂ.1 ನನ್ನ ತಾತ ಪಟಾಲಪ್ಪನ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಪಟಾಲಪ್ಪ, ನಾಗರಾಜಪ್ಪ, ಮಂಜುನಾಥ, 1 ನೇ ಪ್ರತಿವಾದಿ ಅಕ್ಕಯಮ್ಮ ಮತ್ತು ವಾದಿ ನಂ.2 ಮತ್ತು 3 ಎಲ್ಲರೂ ಸೇರಿ ದಿ.13-01-2004 ರಂದು ಐಟಂ ನಂ.1 ನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪಟಾಲಪ್ಪ ಆತನ ಕುಟುಂಬ ಪೋಷಣೆಗೆಗಾಗಿ ಐಟಂ ನಂ.1 ನ್ನು ಮಾರಾಟ

ಮಾಡಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯಿಂದ ಬರಬೇಕಾದ ಎಲ್ಲಾ ಹಣವನ್ನು ಪಟಾಲಪ್ಪ ಪಡೆದುಕೊಂಡಿದ್ದಾರೆ ಎಂದರೆ ಸರಿ. ನಾಗರಾಜಪ್ಪ ಸದರಿ ಐಟಂ ನಂ.2 ನ್ನು ಮಾರಾಟ ಮಾಡಲು ಡಿಸಿ ಯವರಿಂದ ಅನುಮತಿ ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಐಟಂ ನಂ.2 ನ್ನು ಕೂಡ ನಾಗರಾಜ್, ಅಕ್ಕಯಮ್ಮ, 2 ಮತ್ತು 3 ನೇ ವಾದಿಗಳು ದಿ.15-12-2004 ರಂದು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಐಟಂ ನಂ.2 ನ್ನು ನಾಗರಾಜ್ ತನ್ನ ಕುಟುಂಬ ಪೋಷಣೆಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯಪತ್ರದ ಅಡಿಯಲ್ಲಿ ನಾಗರಾಜ್ ಗೆ ಬರಬೇಕಾದ ಎಲ್ಲಾ ಹಣ ಬಂದಿದೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟ ಕ್ರಯಪತ್ರಗಳ ಆಧಾರದ ಮೇಲೆ ಅವರುಗಳೇ ಐಟಂ ನಂ.1 ಮತ್ತು 2 ರಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

6) ನಿ.ಪಿ.5 ಪಹಣಿಯಲ್ಲಿ ಸ್ವಾಧೀನದಾರರ ಕಾಲಂ ನಲ್ಲಿ ಮುಕುಂದರಾಜ್ ಎಂಬ ಹೆಸರು ನಮೂದಾಗಿದೆ ಎಂದರೆ ಸರಿ. ನಿ.ಪಿ.5 ಪಹಣಿಯ ವ್ಯವಸಾಯಗಾರರ ಕಾಲಂನಲ್ಲಿ ಕೂಡ ಮುಕುಂದರಾಜ್ ಎಂಬ ಹೆಸರು ನಮೂದಾಗಿದೆ ಎಂದರೆ ಸರಿ. ಈ ಪಹಣಿಯಲ್ಲಿ ಭೂ ಪರಿವರ್ತನೆ ಆಗಿದೆ ಎಂದು ಕೂಡ ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 2 ಮತ್ತು 3 ನೇ ಪ್ರತಿವಾದಿಗಳೇ ಸ್ವಾಧೀನ ಹೊಂದಿದ್ದಾರೆ ಎಂದರೆ ಇಲ್ಲ, ನಾವೇ ಸ್ವಾಧೀನ ಹೊಂದಿದ್ದೇವೆ. ನಾನು ಸ್ವಾಧೀನ ಹೊಂದಿರುವ ಬಗ್ಗೆ ಕೋರ್ಟಿಗೆ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ಸಾಕ್ಷಿಯು ಇವೇ ದಾಖಲೆಗಳು ಎಂದು ಹೇಳುತ್ತಾರೆ. ನಾನು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7) ನಿ.ಪಿ.1 ವಂಶವೃಕ್ಷದಲ್ಲಿ ದಿನಾಂಕ ಮತ್ತು ಸ್ಥಳ ಎಂಬ ಜಾಗದಲ್ಲಿ ಖಾಲಿ ಬಿಡಲಾಗಿದೆ ಎಂದರೆ ಸರಿ. ನಿ.ಪಿ.1 ಕ್ಕೆ ಯಾವುದೇ ಸಾಕ್ಷಿದಾರರು ಸಹಿ ಮಾಡಿಲ್ಲವೆಂದರೆ ಸರಿ. ಸದರಿ ನಿ.ಪಿ.1 ರಲ್ಲಿ ಸಾಕ್ಷಿಗಳ ಸಹಿ ಇಲ್ಲದ ಕಾರಣ ಮತ್ತು ಖಾಲಿ ಜಾಗ ಬಿಟ್ಟಿರುವ ಕಾರಣ ಇದು ಸರಿಯಾದ ದಾಖಲೆ ಅಲ್ಲವೆಂದರೆ ಸರಿಯಲ್ಲ. ನಿ.ಪಿ.1 ನ್ನು ಬಿಟ್ಟರೆ ನಾನು ನಾಗರಾಜಪ್ಪನ ಮಗಳೆಂಬ ಬಗ್ಗೆ ಬೇರೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ತಿದ್ದುಪಡಿ ವಾದ ಪತ್ರದಲ್ಲಿ ನಾನೊಬ್ಬಳೇ

ಸಹಿ ಮಾಡಿದ್ದು, 2 ಮತ್ತು 3 ನೇ ವಾದಿಗಳು ಸಹಿ ಮಾಡಿಲ್ಲವೆಂದರೆ ಸರಿ. ಆದ್ದರಿಂದ ಅದು ಊರ್ಜಿತ ತಿದ್ದುಪಡಿ ವಾದಪತ್ರವಲ್ಲ ಎಂದರೆ ಸಾಕ್ಷಿಯು ದಾವೆ ಹಾಕಿರುವುದು ನಾನು ಒಬ್ಬಳೇ ಆಗಿರುವುದರಿಂದ ನನ್ನೊಬ್ಬಳ ಸಹಿ ಸಾಕೆಂದು ನಾನು ಮಾತ್ರ ಸಹಿ ಮಾಡಿದ್ದೇನೆ ಎನ್ನುತ್ತಾರೆ. ನಾನು ಮತ್ತು ನನ್ನ ತಾಯಿ ಅಕ್ಕಯಮ್ಮ ಚೆನ್ನಾಗಿದ್ದೇವೆ ಎಂದರೆ ಹೌದು, ಎಲ್ಲಾ ಫಂಕ್ಷನ್ ಗಳಲ್ಲಿ ಭೇಟಿಯಾಗುತ್ತೇವೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನು ಮತ್ತು ನನ್ನ ಗಂಡ ಇಬ್ಬರೂ ಸೇರಿ ಮಾಹಿತಿ ಕೊಟ್ಟಿದ್ದೇವೆ. ನಾನು ದಾವೆಯಲ್ಲಿ ಪಾಲು ವಿಭಾಗ ಮಾತ್ರ ಕೇಳಿದ್ದು, 2 ರಿಂದ 6 ನೇ ಪ್ರತಿವಾದಿಗಳ ಕ್ರಯಪತ್ರಗಳ ಬಗ್ಗೆ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ಪಟಾಲಪ್ಪ ಮತ್ತು ನಾಗರಾಜಪ್ಪ ಹಾಗೂ ಇತರರು ಐಟಂ ನಂ.1 ಮತ್ತು 2 ನ್ನು ಮಾರಾಟ ಮಾಡಿದ 2004 ರಲ್ಲೇ ನಮಗೆ ಅದರ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತುಗಳಲ್ಲಿ 2 ರಿಂದ 6 ನೇ ಪ್ರತಿವಾದಿಗಳು ಲೇಔಟ್ ನಿರ್ಮಾಣ ಮಾಡಿ ಸೈಟುಗಳನ್ನು ರಚಿಸಿದ್ದಾರೆ ಎಂದರೆ ಇಲ್ಲ, ನಮ್ಮ ಆಸ್ತಿ ಹಾಗೇ ಉಳಿದಿದೆ. ನಮ್ಮ ಆಸ್ತಿ ಹಾಗೇ ಉಳಿದಿರುವ ಬಗ್ಗೆ ನಾನು ಮುಂದಿನ ದಿನಾಂಕದಂದು ಅದರ ಫೋಟೋಗಳನ್ನು ಹಾಜರು ಮಾಡಬಲ್ಲೆ. 2 ರಿಂದ 6 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ಒಳಗೊಂಡು ಸುಮಾರು 120 ಎಕರೆಯಲ್ಲಿ ಲೇಔಟ್ ರಚಿಸಿ ಸೈಟುಗಳನ್ನು ಮಾಡಿದ್ದಾರೆ ಎಂದರೆ ಇಲ್ಲ, ನಮ್ಮ ಅಸ್ತಿ ಹಾಗೇ ಉಳಿದಿದೆ. ನಮಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು, ಬಾಧ್ಯತೆ ಇರದಿದ್ದರೂ 1 ನೇ ಪ್ರತಿವಾದಿ ಜೊತೆ ಶಾಮೀಲಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**